# ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

KARNATAKA SAMSKRIT UNIVERSITY

# कर्नाटक-संस्कृत-विश्वविद्यालय:

श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.


ಸಂಖ್ಯೆ: ಕಸಂವಿ/ಪ್ರ.ಸ./2017-18 /371-25 ದಿನಾಂಕ: 19.01.2018

ಮಾನ್ಯರೇ,

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ ನಲವತ್ತೆರಡನೆಯ** ಸಭೆಯು ದಿನಾಂಕ: **19.01.2018**ರ **ಶುಕ್ರವಾರ ಪೂರ್ವಾಹ್ನ 11.00 ಗಂಟೆಗೆ** ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಕುಲಪತಿಗಳು ವಹಿಸಿದ್ದರು. ಈ ಪತ್ರದೊಂದಿಗೆ ಆ ದಿನ ನಡೆದ ಸಭೆಯ ನಡಾವಳಿಯನ್ನು ತಮ್ಮ ಅವಗಾಹನೆಗೆ ಕಳುಹಿಸಿಕೊಡಲಾಗಿದೆ.

ಈ ಸಭೆಯ ನಡಾವಳಿಗಳಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪತ್ರ ತಲುಪಿದ ದಿನಾಂಕದಿಂದ ಹತ್ತು ದಿನಗಳೊಳಗಾಗಿ ಸಲ್ಲಿಸಲು ಕೋರಲಾಗಿದೆ.

ವಂದನೆಗಳೊಂದಿಗೆ,

Sd/-
**ಕುಲಸಚಿವರು**
ಕುಲಸಚಿವರು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು – 560 018

ಇವರಿಗೆ,

1. **ಶ್ರೀಮತಿ ಸುಜಾತ ಗೌಡ,** # 30, 7ನೇ ಹಂತ, 2ನೇ ಮುಖ್ಯರಸ್ತೆ, ಬಿ.ಇ.ಎಂ.ಎಲ್. ಲೇಔಟ್, ಮೈಲಸಂದ್ರ, ಕೆಂಗೇರಿ, ಬೆಂಗಳೂರು – 560059.
2. **ಶ್ರೀ ಶಿವಕುಮಾರ್ ಎನ್.,** # 109, 2ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, ಪಾಂಡುರಂಗ ಬಡಾವಣೆ, ಅರಕೆರೆ ಗೇಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560076.
3. **ಶ್ರೀ ಪರಪ್ಪ ಬಸಪ್ಪ ಬಾವಲತ್ತಿ,** ರಾಮಪುರ, ರಬಕವಿ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.
4. **ಪ್ರೊ. ಮೈಕೆಲ್,** ಸಂಸ್ಕೃತ ಪ್ರಾಧ್ಯಾಪಕರು, ಗುಲ್ಬರ್ಗಾ ವಿಶ್ವವಿದ್ಯಾಲಯ, ಜ್ಞಾನಗಂಗಾ, ಕಲಬುರಗಿ-585106.
5. **ಶ್ರೀಮತಿ ಜಯಶ್ರೀ ವಿ. ಕೊರತಿ,** ಕೆನರಾ ವೆಲ್‌ಫೇರ್ ಟ್ರಸ್ಟ್ ಎಜುಕೇಷನ್ ಕಾಲೇಜು, ದಾಂಡೇಲಿ, ಉತ್ತರ ಕನ್ನಡ ಜಿಲ್ಲೆ – 581325
6. **ವಿದ್ವಾನ್ ಎಂ. ಸಿದ್ಧಮಲ್ಲ ಸ್ವಾಮಿ,** ನಂ. 136/1, ಶ್ರೀ ನೀಲಕಂಠಸ್ವಾಮಿ ಮಠ, ಹರಿಶ್ಚಂದ್ರ ರಸ್ತೆ, ಖಿಲ್ಲೆ ಮೊಹಲ್ಲಾ, ಮೈಸೂರು-570009.
7. **ಶ್ರೀ ಗಜಾನನ ಲಕ್ಷ್ಮೀನಾರಾಯಣ ಭಟ್ಟ,** ಉಮ್ಮಚಗಿ, ಯಲ್ಲಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ – 581347
8. **ಡಾ. ಕೆ. ಸುಧಾಕರ್,** ನಂ. 346/347, 'ಪ್ರೇಮವಿಲ್ಲಾ', 14ನೇ ಮುಖ್ಯರಸ್ತೆ, ಆರ್.ಎಂ.ವಿ. ಬಡಾವಣೆ, ಸದಾಶಿವನಗರ, ಬೆಂಗಳೂರು-80.
9. **ಕ್ಯಾಪ್ಟನ್ ಗಣೇಶ್ ಕಾರ್ಣಿಕ್,** ರೂಮ್ ನಂ. 145, 1ನೇ ಮಹಡಿ, ವಿಧಾನಸೌಧ, ಬೆಂಗಳೂರು-560001.
10. **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ (ವಿಶ್ವವಿದ್ಯಾಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು-560001
11. **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ವಿಧಾನಸೌಧ, ಬೆಂಗಳೂರು-560001
12. **ಸರ್ಕಾರದ ಕಾರ್ಯದರ್ಶಿ,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ) ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು-560001
13. **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ-ನೈಋತ್ಯ ಪ್ರಾದೇಶಿಕ ಕೇಂದ್ರ, ಪ್ರಸನ್ನಕುಮಾರ್ ಬ್ಲಾಕ್, ಅರಮನೆ ರಸ್ತೆ, ಬೆಂಗಳೂರು-09,
14. **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು-570001.
15. **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-560002.
16. **ಆಯುಕ್ತರು,** ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು-560001
17. **ನಿರ್ದೇಶಕರು,** ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ ಬೆಂಗಳೂರು-560001
18. **ನಿರ್ದೇಶಕರು,** ಪದವಿಪೂರ್ವ ಶಿಕ್ಷಣ ಇಲಾಖೆ, 18 ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012
19. **ನಿರ್ದೇಶಕರು,** ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು-560009
20. **ಆಯುಕ್ತರು,** ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-560001

**ಪ್ರತಿಗಳು:**

1. **ಘನತೆವೆತ್ತ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು,** ರಾಜಭವನ, ಬೆಂಗಳೂರು – 560001
2. **ಮಾನ್ಯ ಕುಲಪತಿಯವರ ಆಪ್ತಶಾಖೆ,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.
3. ಕಛೇರಿ ಪ್ರತಿ
4. ರಕ್ಷತಾ ಪ್ರತಿ
5. ಜಾಲತಾಣಕ್ಕೆ ಅಳವಡಿಸಲು – ತುರ್ತು

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक–संस्कृत–विश्वविद्यालय:
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

## 19.01.2018ರಂದು ನಡೆದ ಪ್ರಶಾಸನ ಸಮಿತಿ (ಸಿಂಡಿಕೇಟ್) 42ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ 42ನೇ ಸಭೆಯು** ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ಜನವರಿ 19, 2018ರ ಶುಕ್ರವಾರ ಪೂರ್ವಾಹ್ನ 11.00** ಗಂಟೆಗೆ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಪದ್ಮಾಶೇಖರ್**, ಕುಲಪತಿಗಳು | ಅಧ್ಯಕ್ಷರು |
| ೨. | **ಶ್ರೀಮತಿ ಸುಜಾತ ಗೌಡ**, ಬೆಂಗಳೂರು | ಸದಸ್ಯರು |
| ೩. | **ಶ್ರೀ ಶಿವಕುಮಾರ್ ಎನ್.**, ಬೆಂಗಳೂರು | ಸದಸ್ಯರು |
| ೪. | **ಶ್ರೀ ಪರಪ್ಪ ಬಸಪ್ಪ ಬಾವಲತ್ತಿ**, ನಿವೃತ್ತ ಅಧ್ಯಾಪಕರು, ರಾಮಪುರ, ರಬಕವಿ | ಸದಸ್ಯರು |
| ೫. | **ಶ್ರೀಮತಿ ಜಯಶ್ರೀ ವಿ. ಕೊರತಿ**, ಪ್ರಾಚಾರ್ಯರು, ದಾಂಡೇಲಿ | ಸದಸ್ಯರು |
| ೬. | **ವಿದ್ವಾನ್ ಸಿದ್ಧಮಲ್ಲ ಸ್ವಾಮಿ**, ನಿವೃತ್ತ ಪ್ರಾಧ್ಯಾಪಕರು, ಮೈಸೂರು | ಸದಸ್ಯರು |
| ೭. | **ಶ್ರೀ ಆರ್. ಸೋಮಶೇಖರ್**, ಉಪ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೮. | ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು – ಪರವಾಗಿ **ಶ್ರೀಮತಿ ಮಂಜುಳಾ ಸಿ.ಎನ್.**, ಸಹಾಯಕ ನಿರ್ದೇಶಕರು | ಸದಸ್ಯರು |
| ೯. | **ಶ್ರೀಮತಿ ಎಂ. ಶಿಲ್ಪ**, ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಡಾ. ಮೈಕೆಲ್**, ಪ್ರಾಧ್ಯಾಪಕರು ಮತ್ತು ಡೀನ್, ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ | ಸದಸ್ಯರು |
| ೨. | **ವಿದ್ವಾನ್ ಗಜಾನನ ಲಕ್ಷ್ಮೀನಾರಾಯಣ ಭಟ್ಟ**, ನಿವೃತ್ತ ಪ್ರಾಚಾರ್ಯರು, ಉಮ್ಮಚಗಿ | ಸದಸ್ಯರು |
| ೩. | **ಡಾ. ಕೆ. ಸುಧಾಕರ್**, ಶಾಸಕರು(ಚಿಕ್ಕಬಳ್ಳಾಪುರ), ಬೆಂಗಳೂರು | ಸದಸ್ಯರು |
| ೪. | **ಕ್ಯಾಪ್ಟನ್ ಗಣೇಶ್ ಕಾರ್ಣಿಕ್**, ಮಾನ್ಯ ವಿಧಾನಪರಿಷತ್ ಸದಸ್ಯರು, ಬೆಂಗಳೂರು | ಸದಸ್ಯರು |
| ೫. | **ಅಪರ ಮುಖ್ಯ ಕಾರ್ಯದರ್ಶಿಗಳು**, ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೬. | **ಕಾರ್ಯದರ್ಶಿಗಳು**, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೭. | **ಪ್ರಾದೇಶಿಕ ನಿರ್ದೇಶಕರು**, ಯುಜಿಸಿ–ನೈಋತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು–09 | ಸದಸ್ಯರು |
| ೮. | **ಆಯುಕ್ತರು**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೯. | **ಆಯುಕ್ತರು**, ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು–560001 | ಸದಸ್ಯರು |
| ೧೦. | **ನಿರ್ದೇಶಕರು**, ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಬೆಂಗಳೂರು–560001 | ಸದಸ್ಯರು |
| ೧೧. | **ನಿರ್ದೇಶಕರು**, ಪದವಿಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಬೆಂಗಳೂರು–560012 | ಸದಸ್ಯರು |
| ೧೨. | **ನಿರ್ದೇಶಕರು**, ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು–560009 | ಸದಸ್ಯರು |
| ೧೩. | **ನಿರ್ದೇಶಕರು**, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–560001 | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಂಡಿತವಾಗಿ ನಿರ್ಣಯಗೊಂಡವು.

| ವಿ.ಸಂ. | ವಿಷಯ ಮತ್ತು ಟಿಪ್ಪಣಿ |
|---|---|
| ವಿಷಯ 01 | **ಪ್ರಶಾಸನ ಸಮಿತಿ 41ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ.**<br>ಪ್ರಶಾಸನ ಸಮಿತಿ 41ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 22.12.2017ರಂದು ನಡೆಯಿತು. ಸಭೆಯ ನಿರ್ಣಯದಂತೆ ಕೈಗೊಳ್ಳಲಾದ ಅನುಪಾಲನಾ ವರದಿಯನ್ನು ಪ್ರಶಾಸನ ಸಮಿತಿಯ *ಅನುಮೋದನೆಗಾಗಿ ಮಂಡಿಸಿದೆ.* |
| ನಿರ್ಣಯ | **ಸಭೆಯು ಪ್ರಶಾಸನ ಸಮಿತಿ 41ನೇ ಸಭೆಯ ಅನುಪಾಲನಾ ವರದಿಯನ್ನು ಪರಿಶೀಲಿಸಿ, ಒಪ್ಪಿಗೆಯನ್ನು ನೀಡಿತು.** |

| | |
|---|---|
| ವಿಷಯ 02 | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಕಾನೂನು ಸಲಹೆಗಾರರನ್ನು ಬದಲಾಯಿಸುವ ಬಗೆಗೆ.**<br>ದಿನಾಂಕ: 10.10.2013ರಂದು ನಡೆದ ಪ್ರಶಾಸನ ಸಮಿತಿ 16ನೇ ಸಭೆಯ ಅನುಮೋದನೆಯಂತೆ, ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಕಾನೂನು ಸಲಹೆಗಾರರಾಗಿ ಶ್ರೀ ಸಿ. ವೆಂಕಟೇಶ್, ವಕೀಲರು, ಬೆಂಗಳೂರು –ಇವರನ್ನು ನೇಮಕ ಮಾಡಿಕೊಳ್ಳಲಾಗಿದೆ. ಕಳೆದ ನಾಲ್ಕು ವರ್ಷಗಳಿಂದ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಕಾನೂನು ಸಲಹೆಗಾರರಾಗಿರುವ ಶ್ರೀ ಸಿ. ವೆಂಕಟೇಶ್ ಅವರನ್ನು ಬದಲಾಯಿಸಿ, ನೂತನ ಕಾನೂನು ಸಲಹೆಗಾರರನ್ನು ನೇಮಿಸಿಕೊಳ್ಳಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಲಾಗಿದೆ. |
| ನಿರ್ಣಯ | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಕಾನೂನು ಸಲಹೆಗಾರರನ್ನು ಬದಲಾಯಿಸುವುದಕ್ಕೆ ಸಭೆಯು ಒಪ್ಪಿಗೆಯನ್ನು ನೀಡಿತು. ಕಾನೂನುತಜ್ಞರನ್ನು ನೇಮಿಸುವವರೆಗೆ ಕೇಸು ಬರಬಹುದಾದ ಸಾಧ್ಯತೆಯ ಸಂದರ್ಭವಿದ್ದಲ್ಲಿ ಶ್ರೀ ಸಿ. ವೆಂಕಟೇಶ್ ಅವರನ್ನು ಮುಂದುವರೆಸಲು ಅನುಮೋದನೆಯನ್ನು ನೀಡಿತು.** |
| ವಿಷಯ 03 | **ಇಂಗ್ಲಿಷ್ ವಿಶೇಷೋಪನ್ಯಾಸವನ್ನು ಏರ್ಪಡಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಬಿ.ಎ.–ಶಾಸ್ತ್ರಿ ಹಾಗೂ ಎಂ.ಎ.–ಆಚಾರ್ಯ ಪದವಿಗಳನ್ನು ನಡೆಸುತ್ತಿರುವುದು ಸರಿಯಷ್ಟೆ. ಈ ಪದವಿ ತರಗತಿಗಳಲ್ಲಿ ಇಂಗ್ಲಿಷ್‌ಅನ್ನು ಒಂದು ಭಾಷೆಯಾಗಿ ಬೋಧಿಸಲಾಗುತ್ತಿದೆ. ಇಂಗ್ಲಿಷ್ ಭಾಷೆಯನ್ನು ಬೋಧಿಸಲು ವಿಶ್ವವಿದ್ಯಾಲಯವು ಈವರೆಗೆಖಾಯಂ ಅಧ್ಯಾಪಕರನ್ನು ನೇಮಿಸಿಕೊಂಡಿಲ್ಲ. ಪ್ರಸ್ತುತ, ಅರೆಕಾಲಿಕ/ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಂಡು ಬಿ.ಎ.–ಶಾಸ್ತ್ರಿ ಹಾಗೂ ಎಂ.ಎ.–ಆಚಾರ್ಯ ಪದವಿ ತರಗತಿಗಳನ್ನು ಬೋಧನೆಯನ್ನು ನಡೆಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ, ಇಂಗ್ಲಿಷ್ ಭಾಷೆಯನ್ನು ಬೋಧಿಸಲು ವಿಶ್ವವಿದ್ಯಾಲಯಕ್ಕೆ ಖಾಯಂ ಅಧ್ಯಾಪಕರನ್ನು ನೇಮಕ ಮಾಡಿಕೊಳ್ಳುವವರೆಗೆ, ಬಿ.ಎ.–ಶಾಸ್ತ್ರಿ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅಭ್ಯರ್ಥಿಗಳು ಇಂಗ್ಲಿಷ್ ಭಾಷೆಯಲ್ಲಿ ಪ್ರೌಢಿಮೆಯನ್ನು ಸಾಧಿಸಲು ಅನುವಾಗುವಂತೆ ಸಂಬಂಧಪಟ್ಟ ಪಠ್ಯವನ್ನು ಕುರಿತು ಪ್ರತಿವರ್ಷವೂ ಮೂರು ದಿನಗಳ ಇಂಗ್ಲಿಷ್ ವಿಶೇಷೋಪನ್ಯಾಸವನ್ನು ಏರ್ಪಡಿಸಬಹುದಾಗಿದೆ. ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಈ ವಿಷಯವನ್ನು ಮಂಡಿಸಲಾಗಿದೆ. |
| ನಿರ್ಣಯ | **ಇಂಗ್ಲಿಷ್ ವಿಶೇಷೋಪನ್ಯಾಸವನ್ನು ಏರ್ಪಡಿಸಲು ಸಭೆಯು ಒಪ್ಪಿಗೆಯನ್ನು ನೀಡಿತು.** |
| ವಿಷಯ 04 | **ರಾಜ್ಯ ಹಾಗೂ ರಾಷ್ಟ್ರಮಟ್ಟದ ಶಲಾಕಾ, ಭಾಷಣ, ಇತ್ಯಾದಿ ಸ್ಪರ್ಧೆಗಳಲ್ಲಿ ಭಾಗವಹಿಸುವ ಸ್ಪರ್ಧಿಗಳು ಹಾಗೂ ಅಧ್ಯಾಪಕರಿಗೆ ಪ್ರಯಾಣಭತ್ಯೆ ಪಾವತಿ, ಇತ್ಯಾದಿ ನಿಯಮಗಳನ್ನು ರೂಪಿಸಲು 'ಪರಿನಿಯಮ ರಚನಾ ಸಮಿತಿ' ರಚಿಸುವ ಬಗೆಗೆ.**<br>ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ನಡೆಯುವ ಶಲಾಕಾ, ಭಾಷಣ, ಇತ್ಯಾದಿ ವಿವಿಧ ಸ್ಪರ್ಧೆಗಳಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಭಾಗವಹಿಸುತ್ತಿದ್ದಾರೆ. ಈ ಸ್ಪರ್ಧೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಅನೇಕ ಬಾರಿ ವಿಜೇತರಾಗಿ ಪದಕಗಳನ್ನೂ ಪಡೆದುಕೊಂಡಿದ್ದಾರೆ. ಈ ಸ್ಪರ್ಧೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವನ್ನು ಪ್ರತಿನಿಧಿಸುವುದರಿಂದ, ಸ್ಪರ್ಧಿಗಳು ಹಾಗೂ ಅಧ್ಯಾಪಕರಿಗೆ ಪ್ರಯಾಣಭತ್ಯೆ ಪಾವತಿಸುವುದೂ ಸೇರಿದಂತೆ ಇತ್ಯಾದಿ ನಿಯಮಗಳನ್ನು ರೂಪಿಸಿಕೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿ 'ಪರಿನಿಯಮ ರಚನಾ ಸಮಿತಿ' ರಚಿಸಬೇಕಾಗಿದ್ದು, ಪ್ರಶಾಸನ ಸಮಿತಿಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಿಲಾಗಿದೆ. |
| ನಿರ್ಣಯ | **'ಪರಿನಿಯಮ ರಚನಾ ಸಮಿತಿ'ಯನ್ನು ರಚಿಸಲು ಸಭೆಯು ಕುಲಪತಿಗಳಿಗೆ ಅಧಿಕಾರವನ್ನು ನೀಡಿತು.** |
| ವಿಷಯ 05 | **ಡಾ. ಅನುಪಮಾ ಬಿ., ಸಹಾಯಕ ಪ್ರಾಧ್ಯಾಪಕರು, ಶಾಸ್ತ್ರನಿಕಾಯ –ಇವರು ವಿದೇಶ ಪ್ರವಾಸ ಕೈಗೊಳ್ಳಲು ಅನುಮತಿಸಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.**<br>ಡಾ. ಅನುಪಮಾ ಬಿ., ಸಹಾಯಕ ಪ್ರಾಧ್ಯಾಪಕರು, ಶಾಸ್ತ್ರನಿಕಾಯ –ಇವರು ತಮ್ಮ ಸ್ವಂತ ಖರ್ಚಿನಲ್ಲಿ ದಿನಾಂಕ: 20.01.2018ರಿಂದ 25.01.2018ರ ವರೆಗೆ ಒಟ್ಟು ಆರು ದಿನಗಳ ಕಾಲ ತಮ್ಮ ಜಮೆಯಲ್ಲಿರುವ ಸಾಂದರ್ಭಿಕ ರಜೆಯನ್ನು ಬಳಸಿಕೊಂಡು ವಿದೇಶ (ದುಬೈ) ಪ್ರವಾಸವನ್ನು ಕೈಗೊಳ್ಳುತ್ತಿದ್ದು, ಇವರ ವಿದೇಶ ಪ್ರವಾಸಕ್ಕೆ ಅನುಮತಿಯನ್ನು ನೀಡಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಲಾಗಿದೆ. |
| ನಿರ್ಣಯ | **ಡಾ. ಅನುಪಮಾ ಬಿ., ಸಹಾಯಕ ಪ್ರಾಧ್ಯಾಪಕರು, ಶಾಸ್ತ್ರನಿಕಾಯ –ಇವರು ವಿದೇಶ ಪ್ರವಾಸ ಕೈಗೊಳ್ಳಲು ಅನುಮತಿ ನೀಡಿರುವುದಕ್ಕೆ ಸಭೆಯು ಘಟನೋತ್ತರ ಅನುಮೋದನೆಯನ್ನು ನೀಡಿತು.** |

| | |
|---|---|
| ವಿಷಯ 06 | **'ಶ್ರೀ ಶಂಕರ ವಾಹಿನಿ'ಯಲ್ಲಿ ವಿಶ್ವವಿದ್ಯಾಲಯದ ಅಧ್ಯಾಪಕರು ಹಾಗೂ ಇತರ ಸಿಬ್ಬಂದಿಗಳು ಅಧಿಕೃತವಾಗಿ ಭಾಗವಹಿಸುವ ಬಗೆಗೆ.**<br>'ಶ್ರೀ ಶಂಕರ ವಾಹಿನಿ'ಯು ನಾಡಿನ ಸಂಸ್ಕೃತಿ, ಸಂಸ್ಕಾರ, ಅಧ್ಯಾತ್ಮ, ಮುಂತಾದ ಪಾರಂಪರಿಕ ವಿಷಯಗಳನ್ನು ಪ್ರಸಾರ ಮಾಡುವ ಪ್ರಮುಖ ವಾಹಿನಿಯಾಗಿದೆ. 'ಶ್ರೀ ಶಂಕರ ವಾಹಿನಿ'ಯು ವಿಶ್ವವಿದ್ಯಾಲಯದೊಂದಿಗೆ ಸಂಸ್ಕೃತ ಭಾಷೆ ಹಾಗೂ ಸಾಹಿತ್ಯವನ್ನು ಪ್ರಸಾರ ಮಾಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಕೋರಿ ಪ್ರಸ್ತಾವನೆಯನ್ನು ನೀಡಿದೆ. ಈ ಹಿನ್ನೆಲೆಯಲ್ಲಿ, ಯಾವುದೇ ಹಣಕಾಸಿನ ನೆರವು ಇಲ್ಲದೆಯೇ ನಮ್ಮ ವಿಶ್ವವಿದ್ಯಾಲಯದ ಅಧ್ಯಾಪಕರು ಹಾಗೂ ಇತರೆ ಸಿಬ್ಬಂದಿಗಳು ಅಧಿಕೃತವಾಗಿ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅನುಮತಿಯನ್ನು ನೀಡಬಹುದಾಗಿದೆ. ಇದಕ್ಕೆ ಸಂಬಂಧಿಸಿದಂತೆ 'ಶ್ರೀ ಶಂಕರ ವಾಹಿನಿ'ಯೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳಬಹುದಾಗಿದ್ದು, ಪ್ರಶಾಸನ ಸಮಿತಿಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಲಾಗಿದೆ. |
| ನಿರ್ಣಯ | **ಸಭೆಯು ವಿವರಗಳನ್ನು ಪರಿಶೀಲಿಸಿ 'ಶ್ರೀ ಶಂಕರ ವಾಹಿನಿ'ಯೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳಲು ಅನುಮೋದನೆಯನ್ನು ನೀಡಿತು ಹಾಗೂ ಈ ಬಗ್ಗೆ ನಿಯಮಾನುಸಾರ ಕ್ರಮವಹಿಸಲು ಸೂಚಿಸಿತು.** |
| ವಿಷಯ 07 | **'ಸಂಸ್ಕೃತ ಗ್ರಂಥ ಪುರಸ್ಕಾರ–2016' ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2010–11ನೇ ಸಾಲಿನಿಂದ 'ಗ್ರಂಥ ಪುರಸ್ಕಾರ' ಯೋಜನೆಯನ್ನು ಹಮ್ಮಿಕೊಂಡು, ಉತ್ತಮ ಸಂಸ್ಕೃತ ಗ್ರಂಥಗಳಿಗೆ ಪುರಸ್ಕಾರವನ್ನು ನೀಡುತ್ತಾ ಬಂದಿದೆ. ಈ ಪುರಸ್ಕಾರವು ಪ್ರಶಸ್ತಿ ಫಲಕ, ಶಾಲು ಮತ್ತು ರೂ. 10,000/– ಗೌರವಧನವನ್ನು ಒಳಗೊಂಡಿದೆ. ಪ್ರಸ್ತುತ, **'ಗ್ರಂಥ ಪುರಸ್ಕಾರ–2016'**ಕ್ಕೆ ಕೆಳಕಂಡ ವಾಙ್ಮಯ ಪ್ರಕಾರಗಳಲ್ಲಿ ಕಳೆದ ಐದು ವರ್ಷಗಳಲ್ಲಿ ಪ್ರಕಟವಾದ ಗ್ರಂಥಗಳನ್ನು ಆಹ್ವಾನಿಸಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.<br>**ವಾಙ್ಮಯ ಪ್ರಕಾರಗಳು:**<br>1. ಸಂಸ್ಕೃತ ಕಾದಂಬರೀ / ಕಥಾಸಾಹಿತ್ಯ<br>2. ಸಂಸ್ಕೃತ ಗದ್ಯ / ಪದ್ಯ / ಕಾವ್ಯ / ನಾಟಕ ಸಾಹಿತ್ಯ<br>3. ಸಂಸ್ಕೃತ ಗ್ರಂಥ ಸಂಪಾದನಾ ಸಾಹಿತ್ಯ<br>4. ಸಂಸ್ಕೃತ ಪ್ರಬಂಧ ವಿಮರ್ಶನ ಸಾಹಿತ್ಯ / ವಿಜ್ಞಾನ ಸಾಹಿತ್ಯ<br>5. ಇತರ ಭಾಷೆಗಳಿಂದ ಸಂಸ್ಕೃತಕ್ಕೆ ಅನುವಾದ<br>6. ಸಂಸ್ಕೃತ ಶಾಸ್ತ್ರೀಯ ಗ್ರಂಥದ ಕನ್ನಡ ಅನುವಾದ<br>7. ಸಂಸ್ಕೃತದ ಅತ್ಯುತ್ತಮ ಸಂಶೋಧನಾ ಪ್ರಬಂಧ (ಪಿಎಚ್.ಡಿ.–ವಿದ್ಯಾವಾರಿಧಿ)<br>8. ಅತ್ಯುತ್ತಮ ಇಂಡಾಲಜಿ ವಿಮರ್ಶಗ್ರಂಥ ಅಥವಾ ಲೇಖನ ಸಂಗ್ರಹ<br>9. ಸಂಸ್ಕೃತ ಸಂಶೋಧನಾ ವಿದ್ಯಾರ್ಥಿಗಳ ಅತ್ಯುತ್ತಮ ಸಂಶೋಧನ ಲೇಖನ (ಸುದೀರ್ಘ–ಕನಿಷ್ಠ 50 ಪುಟಗಳು)<br>10. ಶಿಕ್ಷಕರ ಅತ್ಯುತ್ತಮ ಸಂಸ್ಕೃತ ಸಂಶೋಧನಾ ಲೇಖನ |
| ನಿರ್ಣಯ | **ಸಭೆಯು ಎಲ್ಲಾ ವಿವರಗಳನ್ನು ಪರಿಶೀಲಿಸಿ, ಅನುಮೋದನೆಯನ್ನು ನೀಡಿತು.** |
| **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು** | |
| ವಿಷಯ 01 | **ವಿಶ್ವವಿದ್ಯಾಲಯದ ವಿಸ್ತರಣಾ ಕೇಂದ್ರವನ್ನು ತುಮಕೂರಿನಲ್ಲಿ ಸ್ಥಾಪಿಸುವ ಬಗೆಗೆ.**<br>ಮಾನ್ಯ ಉನ್ನತ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 11.01.2018ರಂದು ಸಭೆಯಲ್ಲಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ತುಮಕೂರು ನಗರದಲ್ಲಿ ಹೊಸದಾಗಿ ನಿರ್ಮಿಸಿರುವ ಕಟ್ಟಡವನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಒದಗಿಸಿಕೊಡುವುದಾಗಿ ಉನ್ನತ ಶಿಕ್ಷಣ ಸಚಿವರು ಮೌಖಿಕವಾಗಿ ತಿಳಿಸಿರುತ್ತಾರೆ. ಈ ಬಗ್ಗೆ ಮುಕ್ತ ವಿಶ್ವವಿದ್ಯಾಲಯದ ನೂತನ ಕಟ್ಟಡವನ್ನು ನಮ್ಮ ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸಲು ಮುಕ್ತ ವಿಶ್ವವಿದ್ಯಾಲಯದ ಕುಲಪತಿಗಳಿಗೆ ಈಗಾಗಲೇ ಪತ್ರವನ್ನು ಬರೆಯಲಾಗಿದೆ. ಮುಕ್ತ ವಿಶ್ವವಿದ್ಯಾಲಯವು ನೂತನ ಕಟ್ಟಡವನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸಿ ನಂತರ, ಈ ಕಟ್ಟಡದಲ್ಲಿ ಸಂಸ್ಕೃತ ವಿಶ್ವವಿದ್ಯಾಲಯದ ವಿಸ್ತರಣಾ ಕೇಂದ್ರವನ್ನು ಸ್ಥಾಪಿಸಲು ಹಾಗೂ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ನೇಮಕಗೊಂಡಿರುವ ಕೆಲವು ಸಿಬ್ಬಂದಿಗಳನ್ನು ಈ ವಿಸ್ತರಣಾ ಕೇಂದ್ರಕ್ಕೆ ನಿಯೋಜಿಸಲು ಅನುಮೋದನೆಗಾಗಿ ಸಭೆಯಲ್ಲಿ ಮಂಡಿಸಿದೆ. |
| ನಿರ್ಣಯ | **ತುಮಕೂರು ನಗರದಲ್ಲಿ ದೊರಕುತ್ತಿರುವ ನೂತನ ಕಟ್ಟಡದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಸ್ತರಣಾ ಕೇಂದ್ರವನ್ನು ಸ್ಥಾಪಿಸಲು ಹಾಗೂ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ನೇಮಕಗೊಂಡಿರುವ ಸಿಬ್ಬಂದಿಗಳನ್ನು ಈ ವಿಸ್ತರಣಾ ಕೇಂದ್ರಕ್ಕೆ ನಿಯೋಜಿಸಲು ಸಭೆಯು ಅನುಮೋದನೆಯನ್ನು ನೀಡಿತು.** |

<table>
<tr><td>ವಿಷಯ<br>02</td><td>ರಾಜ್ಯ ವೇತನಶ್ರೇಣಿಯ ಬೋಧಕೇತರ ಹುದ್ದೆಗಳ ನೇಮಕಾತಿಯನ್ನು ಅನುಮೋದಿಸುವ ಬಗೆಗೆ.<br>ಅಧಿಸೂಚನೆ ಸಂಖ್ಯೆ: ಕಸಂವಿ/ಕ.ರಾ.ವೇ/ಬೋಧಕ ಬೋಧಕೇತರ ಹುದ್ದೆ ನೇ 17/2016–17; ದಿನಾಂಕ: 03.02.2017ರ ಅನ್ವಯ ರಾಜ್ಯ ವೇತನಶ್ರೇಣಿಯ ಬೋಧಕೇತರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ್ದ ಅರ್ಹ ಅಭ್ಯರ್ಥಿಗಳಿಗೆ ದಿನಾಂಕ: 28.12.2017ರಂದು ಲಿಖಿತ ಪರೀಕ್ಷೆ ಹಾಗೂ ದಿನಾಂಕ: 18.01.2018ರಂದು ಸಂದರ್ಶನವನ್ನು ನಡೆಸಲಾಯಿತು. ಆಯ್ಕೆ ಸಮಿತಿಯ ಶಿಫಾರಸ್ಸಿನ ಅನ್ವಯ ಆಯಾ ಹುದ್ದೆಗಳಿಗೆ ಆಯ್ಕೆ ಆಗಿರುವ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.</td></tr>
<tr><td>ನಿರ್ಣಯ</td><td>ರಾಜ್ಯ ವೇತನಶ್ರೇಣಿಯ ಬೋಧಕೇತರ ಯೋಜನಾ ಸಹಾಯಕರು (ಶೈಕ್ಷಣಿಕ), ಸಹಾಯಕರು, ಡಾಟಾ ಎಂಟ್ರಿ ಆಪರೇಟರ್ ಹಾಗೂ ಕಿರಿಯ ಸಹಾಯಕರು ಹುದ್ದೆಗಳಿಗೆ ದಿನಾಂಕ: 18.01.2018ರಂದು ನಡೆದ 'ಆಯ್ಕೆ ಸಮಿತಿ' ಸಭೆಯ ಶಿಫಾರಸ್ಸುಗಳನ್ನು ಸಂಪೂರ್ಣವಾಗಿ ಪರಿಶೀಲಿಸಿತು. ಆಯಾ ಹುದ್ದೆಗಳಿಗೆ ಬೇಕಾಗುವ ಸೇವಾ ಅನುಭವ, ಜ್ಯೇಷ್ಠತೆ ಮತ್ತು ಶೈಕ್ಷಣಿಕ ಅರ್ಹತೆಯನ್ನು ಕ್ರಮಾನುಸಾರವಾಗಿ ಪರಿಗಣಿಸಿ ಆಯ್ಕೆಗೊಂಡಿರುವ ಅಭ್ಯರ್ಥಿಗಳಿಗೆ ಸಭೆಯು ಅನುಮೋದನೆಯನ್ನು ನೀಡಿತು.
<table>
<tr><th>ಕ್ರ.ಸಂ.</th><th>ಹುದ್ದೆಯ ಪದನಾಮ</th><th>ಆಯ್ಕೆಗೊಂಡ ಅಭ್ಯರ್ಥಿಗಳು</th><th>ಮೀಸಲಾತಿ</th></tr>
<tr><td rowspan="5">01.</td><td rowspan="5">ಯೋಜನಾ ಸಹಾಯಕರು (ಶೈಕ್ಷಣಿಕ)</td><td>ಡಾ. ಪಿ.ಆರ್. ಅರ್ಚನಾ ಕಾರಂತ್<br>W/o. ರಾಮಕೃಷ್ಣ ಭಟ್, # 166ಎ, ನೆಲಮಹಡಿ, ಒಂದನೇ ಮನೆ, 13ನೇ ಅಡ್ಡರಸ್ತೆ, ಗಿರಿನಗರ, ಬೆಂಗಳೂರು–560085.</td><td>ಸಾಮಾನ್ಯ</td></tr>
<tr><td>ಗಿರೀಶ ಭಟ್<br>S/o. ಮಹಾಬಲೇಶ್ವರ ಭಟ್, ಶಾಮೆಮನೆ, ಬಲೇಸರ್ (ಪೋ.), ಸಿದ್ದಾಪುರ (ತಾ.), ಉತ್ತರ ಕನ್ನಡ ಜಿಲ್ಲೆ</td><td>ಸಾಮಾನ್ಯ (ಗ್ರಾಮೀಣ)</td></tr>
<tr><td>ತೇಜಸ್ವಿನಿ ಬಿದರಿ<br>C/o. ಗಿರೀಶ ಕೊಂಗಿ, 1ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಶ್ರೀನಗರ, ಧಾರವಾಡ–580003.</td><td>ಸಾಮಾನ್ಯ (ಮಹಿಳೆ)</td></tr>
<tr><td>ಕಾಂತಾಮಣಿ<br>D/o. ಗೋವಿಂದ ಭೋವಿ, ರಮಾನಂದನಗರ, ಜಿ. ನಾಗತಿಹಳ್ಳಿ (ಪೋ.) ಬೆಳ್ಳೂರು (ಹೋ.), ನಾಗಮಂಗಲ (ತಾ.), ಮಂಡ್ಯ ಜಿಲ್ಲೆ.</td><td>ಪ.ಜಾ. (ಗ್ರಾಮೀಣ)</td></tr>
<tr><td>ವಿಜಯಲಕ್ಷ್ಮೀ ಕೆ.ಜಿ.<br>D/o. ಕೆ. ಗಂಗಣ್ಣ, ನಂ. 343, 17ನೇ 'ಬಿ' ಅಡ್ಡರಸ್ತೆ, ಜೆ.ಪಿ. ನಗರ 6ನೇ ಹಂತ, ಬೆಂಗಳೂರು–560078.</td><td>ಪ್ರವರ್ಗ 2ಎ (ಮಹಿಳೆ)</td></tr>
<tr><td>02.</td><td>ಸಹಾಯಕರು</td><td>ಗುರುಪ್ರಸಾದ್ ಆರ್.<br>S/o. ರಾಮಕೃಷ್ಣಪ್ಪ, ತಿಮ್ಮನಹಳ್ಳಿ, ಲಕ್ಕನಹಳ್ಳಿ (ಅಂಚೆ), ಶಿರಾ (ತಾಲ್ಲೂಕು) ತುಮಕೂರು ಜಿಲ್ಲೆ – 572113</td><td>ಸಾಮಾನ್ಯ</td></tr>
<tr><td>03.</td><td>ಡಾಟಾ ಎಂಟ್ರಿ ಆಪರೇಟರ್</td><td>ವಿದ್ಯಾಶಂಕರ ಎಂ.ಎಸ್.<br>S/o. ಶ್ರೀಧರ ಎಂ.ಆರ್., 'ಅವ್ವ ನಿಲಯ', ಸ್ಟೆಲ್ಲಾ ಮಾರೀಸ್ ಶಾಲೆ ಹತ್ತಿರ, ಹಿರೇಮಠ, ಹೊನ್ನಾಳಿ–577217, ದಾವಣಗೆರೆ ಜಿಲ್ಲೆ</td><td>ಮೀಸಲುರಹಿತ</td></tr>
<tr><td>04.</td><td>ಕಿರಿಯ ಸಹಾಯಕರು</td><td>ಸುರೇಶ ಬಿ.ಆರ್.<br>S/o. ರಾಜಪ್ಪ, ಬಂಜಗೊಂಡನಹಳ್ಳಿ, ಟಿ. ನುಲೇನೂರು (ಪೋ.) ಹೊಳಲ್ಕೆರೆ (ತಾ.), ಚಿತ್ರದುರ್ಗ ಜಿಲ್ಲೆ – 577557</td><td>ಪರಿಶಿಷ್ಟ ಪಂಗಡ</td></tr>
</table>
ಉಳಿದಂತೆ, ಯೋಜನಾ ಸಹಾಯಕ (ಶೈಕ್ಷಣಿಕ) – 01 (ಪ್ರವರ್ಗ 2ಬಿ); ಉಪನಿರ್ದೇಶಕರು–01(ಸಾಮಾನ್ಯ); ಕಂಪ್ಯೂಟರ್ ಪ್ರೋಗ್ರಾಮರ್–01(ಸಾಮಾನ್ಯ); ಶೀಘ್ರಲಿಪಿಕಾರರು–01(ಸಾಮಾನ್ಯ); ಟೆಲಿಫೋನ್ ಆಪರೇಟರ್–01[ಪ.ಜಾ.–(ಅಂಗವಿಕಲ) (ಬ್ಯಾಕ್‌ಲಾಗ್)] –ಈ ಹುದ್ದೆಗಳಿಗೆ ಸೂಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲ್ಲದಿರುವ ಹಿನ್ನೆಲೆಯಲ್ಲಿ ಮತ್ತೊಮ್ಮೆ ಅಧಿಸೂಚನೆಯನ್ನು ಹೊರಡಿಸಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕ್ರಮಕೈಗೊಳ್ಳಬಹುದೆಂದು ಸಭೆಯು ಸೂಚಿಸಿತು. ನೇಮಕಾತಿ ಹೊಂದಿರುವವರು ನೇಮಕಾತಿ ಆದೇಶ ಹೊರಡಿಸಿದ ಒಂದು ವಾರದ ಒಳಗೆ ಕರ್ತವ್ಯಕ್ಕೆ ಹಾಜರಾಗಲು ಸಭೆಯು ಸೂಚಿಸಿತು.</td></tr>
</table>

Shilpa

ಶ್ರೀಮತಿ ಎಂ. ಶಿಲ್ಪ, ಕೆ.ಎ.ಎಸ್.
ಸದಸ್ಯ ಕಾರ್ಯದರ್ಶಿ

ಪ್ರೊ. ಪದ್ಮಾಶೇಖರ್
ಅಧ್ಯಕ್ಷರು